ವಿಷಯ: ಜಿಲ್ಲಾ ಪರಿಷತ್ತಿನಿಂದ ಲೋಕೋಪಯೋಗಿಗೆ ಕಡತ ವರ್ಗಾವಣೆ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 165(402)

ಮಾನ್ಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ಬೆಳ್ಳಾರದ ಬೂದಿಗುಡ್ಡ ಕಾವಲ್ ಕೆರೆಯು ಮೊದಲಿಗೆ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿದ್ದು ಈಗ ಅದು ಲೋಕೋಪಯೋಗಿ ಇಲಾಖೆಗೆ ವರ್ಗಾವಣೆಯಾಗಬೇಕಾಗಿರುವುದು ನಿಜವೇ?

ಆ) ಇಲಾಖೆಗೆ ವರ್ಗಾಯಿಸಲು ಈ ವಿಳಂಬಕ್ಕೆ ಕಾರಣವೇನು? ಹಾಗೂ ಎಂದು ವರ್ಗಾಯಿಸಲಾಗುವುದು.

ಶ್ರಿ. ಎಂ. ಪಿ. ಪ್ರಕಾಶ್
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಅ) ದಿನಾಂಕ: 3.8.1992ರ ಸರಕಾರಿ ಆದೇಶದಲ್ಲಿ ಈ ಕೆರೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿದೆ. ಮತ್ತು ಸಂಬಂಧಪಟ್ಟ ಕಡತಗಳನ್ನು 92-93ರಲ್ಲಿ ಆ ಇಲಾಖೆಗೆ ವರ್ಗಾಯಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ವಿಷಯ : ಪಶುವೈದ್ಯಾ ಚಿಕಿತ್ಸಾ ಕೇಂದ್ರ ಮಂಜೂರಾತಿ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ. 166(403)

ಶ್ರೀ. ಟಿ.ಜಿ. ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ, ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ಚಿಕ್ಕನಾಯಕನ ಹಳ್ಳಿ ತಾಲ್ಲೂಕುಯಳನಡು, ಶಿರಾ ತಾಲ್ಲೂಕು ತುಪ್ಪದಕೋಣ ಮತ್ತು ಗುಬ್ಬಿ ತಾಲ್ಲೂಕಿನ ಆಳಿಲಗಟ್ಟ ಗ್ರಾಮಗಳಲ್ಲಿ ಪಶುವೈದ್ಯ ಚಿಕಿತ್ಸಾಲಯ ಸ್ಥಾಪಿಸಲು ಸರ್ಕಾರದವರು ಯೋಚಿಸಿರುವರೇ?

ಆ) ಸಾಗಿದ್ದಲ್ಲಿ ಈ ಸಾಲಿನಲ್ಲಿ ಸ್ಥಾಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ. ಬಿ.ಎಸ್. ಬಚ್ಚೇಗೌಡ
ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು:

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ:ಕಳ್ಳಂಬೆಳ್ಳ ಕ್ಷೇತ್ರದಲ್ಲಿ ವಿದ್ಯುತ್ ಉಪಸ್ಥಾವರ ಸ್ಥಾಪನೆ

ಚುಕ್ಕೆ ಗುರ್ತಿಲದ ಪ್ರಶ್ನೆ ಸಂಖ್ಯೆ ನಂ.167(405)
ಶ್ರೀ. ಟಿ.ಟಿ. ಜಯಚಂದ್ರ 9ಕಳ್ಳಂಬೆಳ್ಳ)

ಮಾನ್ಯ ಉಪಮುಖ್ಯಮಂತ್ರಿಗಳು, ಈ ಕೆಳಕ,ಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೇ.

ಅ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಸ್ಥಾಪಿಸಲ್ಪಡುವ ವಿದ್ಯುತ್ ಉಪಸ್ಥಾವರಗಳು ಯಾವುವು?

ಆ) ಹೊಸಕೆರೆಯಲ್ಲಿ ಕೈಗೊಂಡ ಉಪ ವಿದ್ಯುತ್ ಸ್ಥಾವರ ಇದುವರೆವಿಗೂ ಯಾವುದೇ ಪ್ರಗತಿ ಇಲ್ಲದಿರುವುದು ಸರ್ಕಾರಕ್ಕೆ ತಿಳಿದಿದೇಯೇ?

ಇ) ಬುಕ್ಕಾಪಟ್ಟಣದಲ್ಲಿ ವೊಲ್ಟೇಜ್ ಕಡಿತದಿಂದಾಗಿ ಜನರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಾದರೆ 95-96ನೇ ಸಾಲಿನಲ್ಲಿ ಉಪಸ್ಥಾವರ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ.

ಶ್ರೀ ಜೆ.ಎಚ್. ಪಟೇಲ್
ಉಪ ಮುಖ್ಯಮಂತ್ರಿಗಳು.

ಅ) ಕಳ್ಳಂಬೆಳ್ಳ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಬುಕ್ಕಾಪಟ್ಟಣ ಗ್ರಾಮದಲ್ಲಿ ಒಂದು 80:11ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) ಹೊಸಕೆರೆಯಲ್ಲಿ 66:11 ಕೆ.ವಿ. ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗಿದೆ. ಆಗಸ್ಟ 95ರ ಅಂತ್ಯದ ವೇಳೆಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಉದ್ದೇಶಿಸಿದೆ.

ಇ) ಹೌದು.

ಈ) ಬುಕ್ಕಾ ಪಟ್ಟಣದಲ್ಲಿ 66:11 ಕೆ.ವಿ. ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದ್ದು ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.